ಪಿಡಬ್ಲೂ: 3

**ದಿನಾಂಕ: 27-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಮಾನ್ಯ ಸ ಸ ಅ ರವರಿಂದ:-**

ಪಂಚನಾಮೆ ಕಾಲದಲ್ಲಿ ಕೆಲವೊಂದು ರಿಜಿಸ್ಟರ್ ಗಳನ್ನು ವಶಪಡಿಸಿಕೊಂಡಿದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , 2007-08 ರಿಂದ 2010-11 ರವರೆಗಿನ ಕ್ಯಾಶ್ ರಿಜಿಸ್ಟರ್ ಗಳನ್ನು ಒಟ್ಟಾಗಿ ನಿಪಿ-17 ರಿಂದ ನಿಪಿ-19 ಎಂದು ಗುರುತಿಸಲಾಯಿತು. 2006 ಮತ್ತು 2007 ರ ಕ್ಯಾಶ್ ರಿಜಿಸ್ಟರ್ ಪೊಲಿಸ್ ವಶದಲ್ಲಿ ಇದ್ದು ಅದರಲ್ಲಿ ಯಾವುದೇ ಅವ್ಯವಹಾರ ನಡೆದಿರುವ ಬಗ್ಗೆ ಬಂದಿರುವುದಿಲ್ಲ, ಆದ್ದರಿಂದ ಪೋಲಿಸ್ ವಶದಲ್ಲಿ ಇರುತ್ತದೆ ಎಂದು ಸಾಕ್ಷಿ ಹೇಳಿರುತ್ತಾರೆ. 2007-08 ರಿಂದ 2010-11 ರವರೆಗಿನ ಸ್ಟಾಕ್ ರಿಜಿಸ್ಟರ್ ಗಳನ್ನು ಒಟ್ಟಾಗಿ ನಿಪಿ-20 ರಿಂದ ನಿಪಿ-23 ಎಂದು ಗುರುತಿಸಲಾಯಿತು. 2006 ಮತ್ತು 2007 ರ ಸ್ಟಾಕ್ ರಿಜಿಸ್ಟರ್ ಪೊಲಿಸ್ ವಶದಲ್ಲಿ ಇದ್ದು ಅದರಲ್ಲಿ ಯಾವುದೇ ಅವ್ಯವಹಾರ ನಡೆದಿರುವ ಬಗ್ಗೆ ಬಂದಿರುವುದಿಲ್ಲ, ಆದ್ದರಿಂದ ಪೋಲಿಸ್ ವಶದಲ್ಲಿ ಇರುತ್ತದೆ ಎಂದು ಸಾಕ್ಷಿ ಹೇಳಿರುತ್ತಾರೆ.

**ಪಾಟೀಸವಾಲು: ಶ್ರೀ. ಎಂ.ಆರ್. 2 ನೇ ಆರೋಪಿ ಪರ ವಕೀಲರಿಂದ:-**

ನೀವು ಚಿಂತಾಮಣಿ ಕಾರ್ಯಭಾರ ತೆಗೆದುಕೊಂಡು ಕೆಲಸ ಮಾಡಿರುವುದಕ್ಕೆ ದಾಖಲೆ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೆನೆ ಎನ್ನುತ್ತಾರೆ. ನಿಪಿ 1 ದೂರನ್ನು ನೀಡಲು ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೆನೆ ಎನ್ನುತ್ತಾರೆ. ನಿಪಿ 1 ರಲ್ಲಿ ದಿನಾಂಕ ನಮೂದುದಾಗಿಲ್ಲ ಎಂದರೆ ಇರುತ್ತದೆ ಎನ್ನುತ್ತಾರೆ. ನೀವು ಮತ್ತು ಪೋಲಿಸರು ನಿಮ್ಮ ಇಷ್ಟ ಬಂದ ಹಾಗೆ ದಿನಾಂಕವನ್ನು ತಿದ್ದಿರುತ್ತೀರಿ ಎಂದರೆ ಇಲ್ಲ ಎನ್ನುತ್ತಾರೆ. ನೀವು ಆರೋಪಿ 1 ವಿರುದ್ದ ಮಾತ್ರ ದೂರನ್ನು ಕೊಟ್ಟಿರುತ್ತೀರಿ ಎಂದರೆ ಹೌದು ಎನ್ನುತ್ತಾರೆ. 1 ನೇ ಆರೋಪಿ ಕಡೆಯಿಂದ ಹಣ ಬರಬೇಕೆಂದು ಬೆಂಗಳೂರಿನಲ್ಲಿ ಬೇರೆ ಪ್ರಕರಣಗಳು ಇರುತ್ತದೆ ಎಂದರೆ ಹೌದು ಎನ್ನುತ್ತಾರೆ. ಇಲಾಖೆಗೆ

**ಸಿಡಬ್ಲೂಃ 3**

ಬರಬೇಕಾದ ಹಣವನ್ನು ನೀವು ಆರೋಪಿತರ ಕಡೆಯಿಂದ ಗೊತ್ತು ಮಾಡಿರುತ್ತೀರಿ ಎಂದರೆ ಹೌದು ಎನ್ನುತ್ತಾರೆ. 1 ನೇ ಅರೋಪಿ ಹೊರತು ಪಡಿಸಿ ಉಳಿದ ಆರೋಪಿಗಳನ್ನು ಯಾವುದೇ ಆರೋಪ ಇಲ್ಲ ಎಂದರೆ ಇದೆ ಎನ್ನುತ್ತಾರೆ. ಹಣವನ್ನು ವಾಪಸ್ಸು ಕೊಡಿ ಎಂದು ಪ್ರಕರಣ ಇರುತ್ತದೆ ಎಂದರೆ ಕ್ರಮ ತೆಗೆದುಕೊಳ್ಳಿ ಎಂದು ಇರುತದೆ ಎನ್ನುತ್ತಾರೆ. ದೂರು ನೀಡಿದ ನಂತರ ಯಾವಾಗ ಪೊಲೀಸ್ ಹತ್ತಿರ ಹೊಗಿರುತೀರಿ ಎಂದ ನೆನಪಿಲ್ಲ ಎನ್ನುತ್ತಾರೆ. ಎಷ್ಟು ಬಾರಿ ಠಾಣೆಗೆ ಹೋಗಿರುತಿರಿ ಎಂದರೇ 7-8 ಬಾರಿ ಎನ್ನುತ್ತಾರೆ. ಈ ಪ್ರಕರಣದಲ್ಲಿ ನಿಮಗೆ ಬರಬೇಕಾದ ಹಣ ಪಾವತಿ ಆದ ಕಾರಣ ನೀವು ರಾಜಿ ಮಾಡಿ ಮಾಡಿಕೊಂಡಿರುತ್ತೀರಿ ಎಂದರೆ ಹೌದು ಎನ್ನುತ್ತಾರೆ.

**ಪಾಟೀಸವಾಲುಃ ಶ್ರೀ. ಎಸ್.ಇ.ಜಿ. 1 ನೇ ಆರೋಪಿ ಪರ ವಕೀಲರಿಂದಃ-**

ಬೀಜ ನಿಗಮ ರವರು ಮತ್ತು 1 ನೇ ಆರೋಪಿ ಬೆಂಗಳೂರಿನಲ್ಲಿ ಲೋಕ್ ಅದಾಲತ್ ನಲ್ಲಿ ರಾಜಿ ಮಾಡಿಕೊಂಡಿರುತ್ತೀರಿ ಎಂದರೆ ಹೌದು ಎನ್ನುತ್ತಾರೆ. ಈ ಪ್ರಕರಣ ಈಗಾಗಲೇ ರಾಜಿ ಆಗಿರುತ್ತದೆ ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯ ಮಾಡಲು ಅಭ್ಯಂತರ ಇಲ್ಲವಾ ಎಂದರೆ ಇಲ್ಲ ಎನ್ನುತ್ತಾರೆ.

**4 ಮತ್ತು 5 ರ ಆರೋಪಿ ಪರ ವಕೀಲರು 1 ಮತ್ತು 2 ಆರೋಪಿ ಪರ ವಕೀಲರು ಮಾಡಿದ ಪಾಟಿಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)** **ಓ ಹೇ ಕೇ ಸ ಇದೆ.**

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚಿಂತಾಮಣಿ.